**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1087/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಗಿರೀಶ** | ಪ್ರಾಸಾಃ 2 |
| ತಂದೆಯ/ಗಂಡನ ಹೆಸರು | | ರಾಮು | ಚಾಸಾಃ 10 |
| ವಯಸ್ಸು | | 52 ವರ್ಷ | |
| ಕೆಲಸ | | ಕೂಲಿ | ಸಾ ಪ್ರ ಬೋ |
| ವಾಸ | | ಬಸ್ತೀಪುರ | ದಿಃ 02/06/2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 1 ನಮ್ಮ ಊರಿನವರು. ಮೃತ ಪ್ರವೀಣ ನನಗೆ ಪರಿಚಯವಿದೆ. ಚಾಸಾ 9 ರವರ ಪರಿಚಯ ಇಲ್ಲ. ಈ ಪ್ರಕರಣದ ವಿಚಾರ ನನಗೆ ತಿಳಿದಿಲ್ಲ. ಸುಮಾರು 7 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ನಾನು ಬೇರೆ ಕೆಲಸದ ಮೇಲೆ ಹೋದಾಗ ನನ್ನಿಂದ ಸಹಿ ಪಡೆದಿರುತ್ತಾರೆ. ಪೋಲಿಸರು ನನ್ನ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಪಂಚನಾಮೆ ಯಾಗಿದ್ದು, ಸ್ಥಳ ಪಂಚನಾಮೆ ಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸ್ಥಳ ಪಂಚನಾಮೆ ಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ</u>**

ದಿಃ08.05.2018 ರಂದು ಪೊಲೀಸರು ನನ್ನನ್ನು ಕೃತ್ಯ ಸ್ಥಳಕ್ಕೆ ಬರಮಾಡಿಕೊಂಡಿದ್ದು, ಕೃತ್ಯ ಸ್ಥಳದಲ್ಲಿ ನನ್ನ ಹಾಗೂ ಚಾಸಾ 1 ಮತ್ತು 9 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದು, ನಮ್ಮ ಸಮಕ್ಷಮ ಖಾಸಗಿ ಬಸ್ ಸಂಖ್ಯೆ ಕೆಎ 10 ಎ 3679 ಮತ್ತು ಮೋಟಾರ್ ಸೈಕಲ್ ಸಂಖ್ಯೆ ಕೆಎ 11 ವಿ 7239 ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಮದ್ಯಾಹ್ನ 13.15 ಗಂಟೆಯಿಂದ 13.45 ಗಂಟೆಯವರೆಗೆ ಬರೆಯಲಾಯಿತು ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನು ಓದಿ ಕೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**